**ಸಾಕ್ಷಿಗೆ ದಿನಾಂಕಃ23-09-24 ರಂದು ಪ್ರಮಾಣವಚನ ಬೋಧಿಸಲಾಯಿತು.**

**::ಮುಂದುವರಿದ ಪಾಟೀ ಸವಾಲು:: ಪ್ರತಿವಾದಿ ಪರ ಶ್ರೀ. H.R.U ವಕೀಲರಿಂದ::**

1. ನಿಪಿ-1 ಪಹಣಿಯಲ್ಲಿ ಕಾಣುವ 1 ಎಕರೆ 10 ಗುಂಟೆ ಜಾಗವು ನಿರಾಶ್ರಿತರಿಗೆ ಜಾಗ ಮಂಜೂರು ಮಾಡಲು ತೆಗೆದಿಟ್ಟಿರುವ ಜಾಗವಾಗಿರುತ್ತದೆ ಎಂದರೆ ಸರಿ. ಅದೇ ರೀತಿ ಕೆಳಕೊಪ್ಪ ಗ್ರಾಮದ ಸ ನಂ. 228 ರಲ್ಲಿ 2 ಎಕರೆ ಪ್ರದೇಶವನ್ನು ಗ್ರಾ.ಪಂ. ವ್ಯಾಪ್ತಿಯಲ್ಲಿ ಕಂಡು ಬರುವ ನಿರಾಶ್ರಿತರಿಗೆ ನಿವೇಶನ ನೀಡುವ ಸಲುವಾಗಿ ತೆಗೆದಿಟ್ಟಿರುವ ಜಾಗವಾಗಿರುತ್ತದೆ ಎಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

2. ನಿಪಿ-13 ರಿಂದ ನಿಪಿ-16 ಫೋಟೋಗಳಲ್ಲಿ ಕಾಣುವ ಮನೆಯು ನಾನು ಹೇಳುತ್ತಿರುವ ದಾವಾ ಸ್ವತ್ತಿನ ಮನೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಸಾರ್ವಜನಿಕರ ಆಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ ಸದರಿ ಫೋಟೋಗಳನ್ನು ಈ ದಾವೆಗೋಸ್ಕರ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿ ಪಂಚಾಯಿತ್ ಗೆ ಕೇವಲ 30X40 ಅಡಿ ವಿಸ್ತೀರ್ಣದ ನಿವೇಶನವನ್ನು ಮಂಜೂರು ಮಾಡಲು ಮಾತ್ರ ಅಧಿಕಾರ ಇರುತ್ತದೆ ಎಂದರೆ ಸಾಕ್ಷಿಯು ಅದರ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ದಾವಾ ಸಲ್ಲಿಸಿದ ಸಮಯದಲ್ಲಿ ದಾವಾ ಸ್ವತ್ತನ್ನು ಸುಳ್ಳಾಗಿ 60X40 ಅಡಿ ವಿಸ್ತೀರ್ಣದ ನಿವೇಶನ ಎಂದು ಸುಳ್ಳಾಗಿ ವಿವರಿಸಿರುತ್ತೇನೆ ಎಂದರೆ ಸರಿಯಲ್ಲ. ಅಡ್ಡಗದ್ದೆ ಗ್ರಾ.ಪಂ. ವ್ಯಾಪ್ತಿಯಲ್ಲಿ ಅನೇಕ ವಸತಿ ರಹಿತ ವ್ಯಕ್ತಿಗಳು ನಿವೇಶನಗಳ ಮಂಜೂರಾತಿ ಕೋರಿ ಅರ್ಜಿಗಳನ್ನು ಸದರಿ ಗ್ರಾ.ಪಂಚಾಯತಿಗಳಿಗೆ ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿಯು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪ್ರಸ್ತುತದಲ್ಲಿ ಅಡ್ಡಗದ್ದೆ ಪಂಚಾಯಿತಿಗೆ ಕೇವಲ ಕೆಳಕೊಪ್ಪ ಗ್ರಾಮದ ಸ ನಂ. 150 ರಲ್ಲಿ 1 ಎಕರೆ 10 ಗುಂಟೆ ವಿಸ್ತೀರ್ಣದ ಪ್ರದೇಶವನ್ನು ಮಾತ್ರ ನಿವೇಶನ ರಹಿತರಿಗೆ ಮಂಜೂರು ಮಾಡಲು ಅಧಿಕಾರ ಇರುತ್ತದೆ ಎಂದರೆ ಸಾಕ್ಷಿಯು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅದೇ ಗ್ರಾಮದ ಸ.ನಂ.288 ರಲ್ಲಿ ಅಡ್ಡಗದ್ದೆ ಗ್ರಾ.ಪಂ. ಗೆ ಮಂಜೂರಾತಿಗೆ ಪ್ರಸ್ತಾವನೆ ಆಗಿರುತ್ತದೆಯೇ ಹೊರತು ಕಾನೂನು ಬದ್ಧವಾಗಿ ಸದರಿ ಗ್ರಾ.ಪಂ. ಗೆ ಇದುವರೆಗೂ ಸದರಿ ಜಾಗವು ಮಂಜೂರಾತಿ ಆಗಿರುವುದಿಲ್ಲ ಎಂದರೆ ಸಾಕ್ಷಿಯು ಅದರ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

3. ನಾನು ಈ ದಾವೆಯನ್ನು ಸಲ್ಲಿಸಿ ತಾತ್ಕಾಲಿಕ ಪ್ರತಿಬಂಧಕಾಜ್ಞೆ ಪಡೆದಿರುವ ಕಾರಣ ಗ್ರಾಮ ಪಂಚಾಯಿತಿಗೆ ಇವತ್ತಿನ ವರೆಗೂ ಸಹ ಯಾವುದೇ ಪಲಾನುಭವಿಗಳಿಗೆ ಸರ್ವೆ ನಂಬರ್-150 ರಲ್ಲಿ ನಿವೇಶನವನ್ನು ಮಂಜೂರು ಮಾಡಲು ತೊಂದರೆ ಆಗಿರುತ್ತದೆ ಎಂದರೆ ಗೊತ್ತಿಲ್ಲ. ಕೆಳಕೊಪ್ಪ ಗ್ರಾಮದಲ್ಲಿ ಸ ನಂ. 150 ಹೊರತು ಪಡಿಸಿ, ಅಡ್ಡಗದ್ದೆ ಗ್ರಾಮ ಪಂಚಾಯಿತಿಗೆ ಅವರ ವ್ಯಾಪ್ತಿಯಲ್ಲಿ ನಿರಾಶ್ರಿತರಿಗೆ ನಿವೇಶನ ಮಂಜೂರಾತಿ ಮಾಡಲು ಯಾವುದೇ ಸ್ಥಳವಕಾಶ ಇರುವುದಿಲ್ಲ ಎಂದರೆ ಸಾಕ್ಷಿಯು ಅದರ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

4. ನಾನು ದಾವೆ ಸಲ್ಲಿಸಿದ ನಂತರದಲ್ಲಿ ಸದರಿ ಗ್ರಾಮ ಪಂಚಾಯಿತಿಯಲ್ಲಿ ನಡೆದ ಪ್ರತಿಯೊಂದು ಸಭೆ ಗಳಲ್ಲೂ ಸಹ ಮಂಜೂರಾತಿ ಕೋರಿ ಅರ್ಜಿ ಸಲ್ಲಿಸಿರುವ ನಿವೇಶನ ರಹಿತರು ತಮಗೆ ನಿವೇಶವನ್ನು ಮಂಜೂರಾತಿ ಮಾಡಿ ಕೊಟ್ಟಿಲ್ಲ ಎಂದು ಪ್ರತಿವಾದಿ ಜೊತೆ ಗಲಾಟೆ ಮಾಡುತ್ತಿದ್ದಾರೆ ಎಂದರೆ ಸಾಕ್ಷಿಯು ಅದರ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನಗೂ ಸಹ ಪ್ರತಿವಾದಿ ಪಂಚಾಯಿತಿನಿಂದ 30X40 ಅಡಿ ವಿಸ್ತೀರ್ಣದ ನಿವೇಶನವನ್ನು ನನ್ನನ್ನು ಪಲಾನುಭವಿಯಾಗಿ ಆಯ್ಕೆ ಮಾಡಿಕೊಂಡು ಮಂಜೂರಾತಿ ಮಾಡಿ ಕೊಡುವುದಾಗಿ ತಿಳಿಸಿದ್ದರೂ ಸಹ ನಾನೇ ಅದಕ್ಕೆ ನಿರಾಕರಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಹೆಚ್ಚಿನ ಜಾಗವನ್ನು ಸ ನಂ. 150 ರಲ್ಲಿ ನನಗೆ ಪ್ರತಿವಾದಿಗೆ ಇರುವ ಅಧಿಕಾರ ಮೀರಿ ಹೆಚ್ಚಿನ ಜಾಗವನ್ನು ಮಂಜೂರಾತಿ ಮಾಡಿ ಕೊಡುವಂತೆ ಕೋರಿ ಈ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಈಗಲೂ ಸಹ ಪ್ರತಿವಾದಿ ನನಗೆ 30X40 ಅಡಿ ವಿಸ್ತೀರ್ಣದ ನಿವೇಶನವನ್ನು ಮಂಜೂರಾತಿ ಮಾಡಿ ಕೊಡಲು ಸಿದ್ಧವಿರುತ್ತಾರೆ ಎಂದರೆ ಸಾಕ್ಷಿಯು ನಾನು ದಾವಾ ಪತ್ರದಲ್ಲಿ ತೋರಿಸಿರುವ ಅಷ್ಟು ವಿಸ್ತೀರ್ಣದ ಜಾಗವನ್ನು ಮಂಜೂರು ಮಾಡಿ ಕೊಡಬೇಕು ಎಂದು ನುಡಿದಿರುತ್ತಾರೆ.

5. ನಾನು ಗ್ರಾಮ ಪಂಚಾಯಿತಿಯ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಮತ್ತು ಉಳಿದ ಪಲಾನುಭವಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ವಾದ ಕಾರಣವನ್ನು ಸೃಷ್ಟಿಸಿ ಈ ಸುಳ್ಳು ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಹಾಜರು ಪಡಿಸಿರುವ ಯಾವುದೇ ದಾಖಲಾತಿಗಳು ದಾವಾ ಸ್ವತ್ತಿಗೆ ಸಂಬಂಧ ಪಟ್ಟ ದಾಖಲಾತಿಗಳು ಆಗಿರುವುದಿಲ್ಲ

ಎಂದರೆ ಸರಿಯಲ್ಲ. ನಾನು ದಾವಾ ಸ್ವತ್ತಿನ ಮೇಲೆ ಸ್ವಾ ಧೀನದಲ್ಲಿ ಇಲದಿದ್ದರೂ ಸಹ ಇರುತ್ತೇನೆಂದು ಸುಳ್ಳು ಸಾಧನೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ.

**::ಮರು ವಿಚಾರಣೆ ಇಲ್ಲ::**

**(ದಿನಾಂಕಃ23-09-24 ರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇ ಎ ಒ**

ಸಹಿ/-
**ಸಿ.ಜೆ ಮತ್ತು ಜೆ.ಎಂ.ಎಫ್.ಸಿ ನ್ಯಾಃ**
**ಶೃಂಗೇರಿ.**